# ಪ್ರಶ್ನೆ:

# “ಧರ್ಮದಲ್ಲಿ ಬೈಬಲು ನಮ್ಮ ಕೇವಲ ಪ್ರಮಾಣವಾಗಿದ್ದರೆ, ಜನರು ಬೈಬಲನ್ನು ಭಿನ್ನವಾಗಿ ಯಾಕೆ ವ್ಯಾಖ್ಯಾನಿಸುತ್ತಾರೆ?”

## ಉತ್ತರ:

ಸಭಾ ಪುನಃ ಸ್ಥಾಪನೆಯ ದೊಡ್ಡ ತತ್ವಗಳಲ್ಲಿ ಒಂದು “ನಿಜವಾದ ಧರ್ಮವು ಪರಿಶುದ್ಧ ಬರಹಗಳ ಮೇಲೆ ಕಟ್ಟಲ್ಪಟ್ಟಿರುತ್ತದೆ” ಮತ್ತು “ಯಾವುದೇ ಬೋಧನೆಯು ಬೈಬಿಲಿನಲ್ಲಿ ಬೋಧಿಸಲ್ಪಟ್ಟಿರದಿದ್ದರೆ ಅದು ಸ್ವೀಕರಿಸಲ್ಪಡಬಾರದು” ಎಂಬುದು.[1]

ಎಲ್ಲಾ ಸಭೆಗಳು ಒಂದೇ ಮಾರ್ಗದರ್ಶಿಯನ್ನು ಅನುಸರಿಸುತ್ತೇವೆಂದು ಹೇಳುತ್ತವೆ, ಆದರೆ ಅಂಥ ನೂರಾರು ಸಭೆಗಳಿದ್ದು - ಎಲ್ಲವೂ ಭಿನ್ನವಾದ ತತ್ವಗಳೊಂದಿಗಿರುತ್ತವೆ!

ಏನು ತಪ್ಪಾಗಿದೆ? ಧರ್ಮದಲ್ಲಿ ಬೈಬಲು ನಮಗೆ ಒಂದೇ ಅಧಿಕೃತವಾದದ್ದಾಗಿದ್ದರೆ, ಜನರು ಯಾಕೆ ಅದನ್ನು ಅಷ್ಟು ಭಿನ್ನವಾಗಿ ಯಾಕೆ ವ್ಯಾಖ್ಯಾನಿಸುತ್ತಾರೆ? ಅದೇ ಬೈಬಲಿನಿಂದ ನೂರಾರು ಭಿನ್ನವಾದ ಸಭೆಗಳು ಪರಿಣಾಮವಾಗಿ ಬರುವಾಗ, ಸಂಪರ್ಕಿಸುವಿಕೆಯಲ್ಲಿ ನಿಜವಾಗಿಯೂ ಒಂದು ಸಮಸ್ಯೆ ಅಸ್ತಿತ್ವದಲ್ಲಿರುತ್ತದೆ ಅದು ಒಂದು ಸೈನ್ಯದ ಕಮಾಂಡರನು ತನ್ನ ತಂಡಗಳಿಗೆ ಆಜ್ಞೆಗಳನ್ನು ಕಳುಹಿಸುತ್ತಿರುವಂತಿದೆ. ಅವನ ಆಜ್ಞೆಗಳನ್ನು ಅವರು ಓದುವರು ಮತ್ತು ಕೂಡಲೇ ಅವರು ನೂರು ಭಿನ್ನ ಗುಂಪುಗಳಾಗಿ ಯುದ್ಧ ಮಾಡಲು ಪ್ರಾರಂಭಿಸುವರು, ವೈರಿಯೊಂದಿಗೆ ಅಲ್ಲ ಆದರೆ ಒಬ್ಬರಿಗೊಬ್ಬರು! ಇದೇ ರೀತಿಯಲ್ಲಿ, ದೇವರು ತನ್ನ ವಾಕ್ಯವನ್ನು ಕೊಡುತ್ತಾನೆ, ಮತ್ತು ಆ ವಾಕ್ಯವನ್ನು ಓದಿದ ಮೇಲೆ, ಯುದ್ಧ ಮಾಡುವ ನೂರಾರು ಗುಂಪುಗಳಾಗಿ ಬೇರ್ಪಡುವೆವು, ವೈರಿಯ ವಿರುದ್ಧವಾಗಿ ಅಲ್ಲ, ಆದರೆ ಒಬ್ಬರಿಗೊಬ್ಬರು ವಿರುದ್ಧವಾಗಿ ಹೋರಾಡುವೆವು! ಎಲ್ಲಿಯೋ ಏನೋ ತಪ್ಪಾಗಿರುತ್ತದೆ!

ಏನು ತಪ್ಪಾಗಿದೆ? ಈ ಪ್ರಶ್ನೆಗೆ ನಾವು ಉತ್ತರ ಕೊಡಲು ಬಯಸುತ್ತೇವೆ.

### ಅದು ಯಾರ ತಪ್ಪಾಗಿದೆ?

ಮೊದಲನೆಯದಾಗಿ, ಅದು ಯಾರ ತಪ್ಪಾಗಿದೆ? ಎಂದು ನಮ್ಮನ್ನು ನಾವೇ ಪ್ರಶ್ನಿಸಿಕೊಳ್ಳೋಣ?

ಪ್ರತಿಯೊಂದು ಸಂಪರ್ಕ ಸ್ಥಿತಿಯು ಮೂರು ಕ್ಷೇತ್ರಗಳನ್ನು ಒಳಗೊಂಡಿರುತ್ತದೆ: ಒಂದು ಮೂಲ, ಒಂದು ಸಂದೇಶ ಮತ್ತು ಒಬ್ಬ ಸ್ವೀಕರಿಸುವವನು. ನೀನು ಒಬ್ಬ ಸ್ನೇಹಿತನಿಗೆ ಒಂದು ಪತ್ರ ಬರೆದರೆ, ನೀನು ಮೂಲವಾಗಿದ್ದೀ, ಪತ್ರವು ಸಂದೇಶವಾಗಿದೆ ಮತ್ತು ನಿನ್ನ ಸ್ನೇಹಿತನು ಸ್ವೀಕರಿಸುವವನಾಗಿದ್ದಾನೆ. ಯಾವುದೇ ಮಾತನಾಡುವ ಪರಿಸ್ಥಿತಿಯಲ್ಲಿ, ಒಬ್ಬನು ಮಾತಾಡುವವನು (ಮೂಲ), ಒಂದು ಭಾಷಣ (ಸಂದೇಶ), ಮತ್ತು ಶ್ರೋತೃಗಳ ಸಭೆ (ಸ್ವೀಕರಿಸುವವರು) ಇರುತ್ತವೆ. ಬೈಬಲಿನ ವಿಷಯದಲ್ಲಿ ಈ ಮೂರು ಅಂಶಗಳೂ ಇರುತ್ತವೆ. 2 ತಿಮೊಥೆ 3:16, 17 ಯೋಚಿಸಿರಿ: "ದೈವ ಪ್ರೇರಿತವಾದ ಪ್ರತಿಯೊಂದು ಪರಿಶುದ್ಧ ಲೇಖನವು ಉಪದೇಶಕ್ಕೂ ಖಂಡನೆಗೂ ತಿದ್ದೂಪಾಟಿಗೂ ನೀತಿ ಶಿಕ್ಷೆಗೂ ಉಪಯುಕ್ತವಾಗಿದೆ. ಅದರಿಂದ ದೇವರ ಮನುಷ್ಯನು ಪ್ರವೀಣನಾಗಿ ಸಕಲ ಸತ್ಕಾರ್ಯಕ್ಕೆ ಸನ್ನದ್ಧನಾಗುವನು." ಪರಿಶುದ್ಧ ಬರಹವು ಇಲ್ಲವೇ ಬೈಬಲ್ (ಸಂದೇಶವು) ಜನರಿಗೆ (ಸ್ವೀಕರಿಸುವವರು) ದೇವರಿಂದ (ಮೂಲವು) ಕೊಡಲ್ಪಟ್ಟಿತು. ಹೀಗೆ, ದೇವರು ಮತ್ತು ಮನುಷ್ಯರ ಮಧ್ಯದಲ್ಲಿ ಸಂಪರ್ಕವು ಕಡಿದು ಹೋಗಿದ್ದರೆ, ಅದು ಈ ಮೂರು ಕ್ಷೇತ್ರಗಳಲ್ಲಿ ಒಂದರಲ್ಲಿ ಇರತಕ್ಕದ್ದು: ಅದು ದೇವರ ತಪ್ಪಾಗಿರಬಹುದು, ಸಂದೇಶದ ತಪ್ಪಾಗಿರಬಹುದು ಇಲ್ಲವೇ ಮಾನವ ಕುಲದ ತಪ್ಪಾಗಿರಬಹುದು. ತಪ್ಪು ಎಲ್ಲಿ ಇರುವುದು?

**ದೇವರ ತಪ್ಪು?**

ಆತನ ಪುಸ್ತಕವನ್ನು ಒಂದೇ ರೀತಿಯಲ್ಲಿ ಅರ್ಥಮಾಡಿಕೊಳ್ಳಲಾಗದೆ ಇರುವಾಗ ಮತ್ತು ಅದರ ಪರಿಣಾಮವಾಗಿ ಭಿನ್ನವಾದ ಸಭೆಗಳಾಗಿ ವಿಭಾಗವಾಗುವಾಗ ಅದು ದೇವರ ತಪ್ಪು ಆಗಿರುವುದೋ?

ದೇವರು ಮನುಷ್ಯನೊಂದಿಗೆ ಒಗಟುಗಳಲ್ಲಿ ಮಾತನಾಡಿದ್ದನೋ? ಅನ್ಯ ದೇವರುಗಳು ಹಾಗೆ ಮಾಡಿದವೆಂದು ಹೇಳುತ್ತಾರೆ; ಅದನ್ನು ಅರ್ಥಮಾಡಿಕೊಳ್ಳು ವುದು ಕಠಿಣವಾಗುತ್ತಿತ್ತು. ಕೆಲವು ಸಲ ತಾವು ಕಲ್ಪಿಸಿಕೊಂಡ ಸಂದೇಶಗಳಲ್ಲಿಯ ನಂಬಿಕೆಯು ಅವರನ್ನು ಅವರ ನಾಶನಕ್ಕೆ ನಡಿಸಿತು.

ನಮ್ಮದೇವರು ಹಾಗಿರುವನೋ? ರಕ್ಷಿಸುವಂತೆ ನಾಶಮಾಡಲಿಕ್ಕೆ ಆಗುವಂತೆ ಇರುವ ಸಂದೇಶವನ್ನು ನಮಗೆ ಕೊಡುವದರಿಂದ ಆತನು ಜನರನ್ನು ನಿರಾಶೆಗೊಳಿಸುವನೋ? ಬೈಬಲು ಒಂದು ಒಗಟು ಇಲ್ಲವೇ ಒಗಟುಗಳ ಸರಣಿಯಾಗಿರುವುದೋ? ಇಲ್ಲ ಒಬ್ಬ ಮನುಷ್ಯನು ಹೀಗೆ ಬರೆದಿದ್ದಾನೆ,

> ಕೆಲವರು ಹಾಗಿರುವುದೆಂದು ವರ್ತಿಸುವದಾದರೂ, ಬೈಬಲು ಜನರಿಗೆ ದೇವರ ಒಗಟಾಗಿರುವದಿಲ್ಲ. ಅವರು ಚರ್ಚಿಸುತ್ತಾರೆ, ಹುಡುಕುತ್ತಾರೆ ಮತ್ತು ಊಹಿಸುತ್ತಾರೆ; ಅವರು ಈ "ಬೀಗದಕೈಯನ್ನು" ಆ "ಬೀಗದ ಕೈಯನ್ನು" ಪ್ರಯತ್ನಿಸುತ್ತಾರೆ; ಸಂಖ್ಯೆಗಳನ್ನು ಕೂಡಿಸುತ್ತಾರೆ, ಸಂಖ್ಯೆಗಳನ್ನು ವಿಭಾಗಿಸುತ್ತಾರೆ, ಸಂಖ್ಯೆಗಳನ್ನು ಗುಣಿಸುತ್ತಾರೆ, ಸಂಖ್ಯೆಗಳನ್ನು ಕಳೆಯುತ್ತಾರೆ. ಮತ್ತು ಅಂತಿಮವಾಗಿ ತಮಗೆ ದೊರೆತ ಕೆಲವೊಂದು ವಾಕ್ಯಭಾಗಗಳು, ಅತೀ ಅಧ್ಭುತವಾದ "ವ್ಯಾಖ್ಯಾನಗಳೊಂದಿಗೆ" ಮುಕ್ತಾಯಗೊಳ್ಳುತ್ತಾರೆ. …
>
> ಬೈಬಲು ಒಂದು ಗುಪ್ತ ಪ್ರಶ್ನೆಯಲ್ಲ; ಅದೊಂದು ಒಗಟಿಲ್ಲ; ಅದು ರಹಸ್ಯವಾದ ಮತ್ತು ಅನಿರೀಕ್ಷಿತ ಅರ್ಥಗಳಿಂದ ತುಂಬಿಕೊಂಡಿರುವದಿಲ್ಲ; ಅದು ಪದ ಬಂಧಗಳ ಪಝಲ್ ಅಲ್ಲ.[2]

ದೇವರು ನಮಗೆ ಒಗಟುಗಳಲ್ಲಿ ಮಾತಾನಾಡುವದಿಲ್ಲ, ಯಾಕಂದರೆ ಆತನು ನ್ಯಾಯದ ದೇವರಾಗಿದ್ದಾನೆ ಮತ್ತು ನಾವು ಬೈಬಲನ್ನು ಅರ್ಥಮಾಡಿಕೊಳ್ಳಬೇಕೆಂದು ಆತನು ಬಯಸುತ್ತಾನೆ. ನಾವು ರಕ್ಷಿಸಲ್ಪಡಬೇಕಾದರೆ ನಾವು ಸತ್ಯವನ್ನು ತಿಳಿಯತಕ್ಕದ್ದು (ಯೋಹಾನ 8:32). ವಾಕ್ಯದಿಂದ ನಾವು ತೀರ್ಪು ಹೊಂದುವೆವು (ಯೋಹಾನ 12:48). ನಾವು ಅದನ್ನು ತಿಳಿಯಬೇಕೆಂದು ಆತನು ನಿರೀಕ್ಷಿಸಿದರೆ ಮತ್ತು ಅಂತಿಮ ವಾಗಿ ಅದರಿಂದ ನಮಗೆ ನ್ಯಾಯತೀರಿಸುವದಾದರೆ, ದೇವರು ನಮಗೆ ಬಿಡಿಸಲು ಅಸಾಧ್ಯವಾದ ಒಗಟನ್ನು ಕೊಡುವುದು ನ್ಯಾಯವಾದದ್ದಾಗಿರುವದಿಲ್ಲ.

ಇದಲ್ಲದೇ, ದೇವರು ಪ್ರೀತಿ ಸ್ವರೂಪನಾಗಿರುವದರಿಂದ ಆತನು ನಮ್ಮೊಂದಿಗೆ ಒಗಟುಗಳಲ್ಲಿಮಾತನಾಡುವದಿಲ್ಲ. ತನ್ನನ್ನುತಾನೇರಕ್ಷಿಸಿಕೊಳ್ಳಲು ಸಹಾಯ ಹೀನನಾದ ಒಬ್ಬ ಮನುಷ್ಯನು ಮುಳುಗುತ್ತಿರುವದನ್ನು ಕಲ್ಪಿಸಿಕೊಳ್ಳಿರಿ. ಅವನನ್ನು ರಕ್ಷಿಸಬಹುದಾದ ಯಾರೋ ಒಬ್ಬನು ದಢದಿಂದ, “ಈ ಒಗಟನ್ನು ನೀನು ಬಿಡಿಸುವದಾದರೆ, ನಾನು ನಿನ್ನನ್ನು ರಕ್ಷಿಸುವೆನು!” ಎಂದು ಹೇಳುವನೆಂದು ಕಲ್ಪಿಸಿಕೊಳ್ಳಿರಿ. ನಾವು ತಪ್ಪಿ ಹೋಗಿದ್ದೇವೆ, ನಿರೀಕ್ಷೆಯಿಲ್ಲದವರಾಗಿದ್ದೇವೆ ಮತ್ತು ನಾವು ಸಹಾಯ ಹೀನರಾಗಿದ್ದೇವೆ. ನಮ್ಮನ್ನು ರಕ್ಷಿಸುವ ಮೊದಲು ನಾವು ಒಗಟನ್ನು ಬಿಡಿಸಬೇಕೆಂದು ದೇವರು ಅಪೇಕ್ಷಿ ಸುವವನೋ? ನಮ್ಮ ದೇವರು ಅಂಥ ರೀತಿಯ ದೇವರಾಗಿರುವದಿಲ್ಲ!

ಬೇರೆ ಮಾತುಗಳಲ್ಲಿ, ಒಗಟುಗಳಲ್ಲಿ ನಮ್ಮ ದೇವರು ಬೈಬಲಿನ ಮುಖಾಂತರ ನಮ್ಮೊಂದಿಗೆ ಮಾತಾಡುವದಿಲ್ಲ ಎಂದು ಹೇಳಬಹುದು. ಯಾಕಂದರೆ ಆತನು ನ್ಯಾಯವಂತನು ಮತ್ತು *ಹಾಗೆ* ಮಾಡುವುದು ಆತನಿಗೆ ಸರಿಯಾಗಿ ಕಾಣುವದಿಲ್ಲ. ಆತನು *ಪ್ರೀತಿಸ್ವರೂಪನು* ಮತ್ತು ಆತನು ಹಾಗೆ ಮಾಡುವುದು ಪ್ರೀತಿಸದೇ ಇರುವಂಥದ್ದಾಗುತ್ತದೆ.

ಇನ್ನೊಂದೆಡೆಯಲ್ಲಿ, ಅದು ದೇವರ ತಪ್ಪಾಗಬಹುದು ಯಾಕಂದರೆ ಆತನು ಮನುಷ್ಯನ ತಲೆಯ ಮೇಲೆ ಮಾತಾಡಬಹುದು. ಇದು ಹೆಚ್ಚು ತೋರಿಕೆಯದದ್ದಾಗಿ ಕಾಣುತ್ತದೆ. ಎಲ್ಲದಕ್ಕಿಂತಲೂ ಹೆಚ್ಚಾಗಿ, ದೇವರ ಯೋಚನೆಗಳೂ ಮಾರ್ಗಗಳೂ ಯಾವಾಗಲೂ ಮನುಷ್ಯನ ವಿಚಾರಗಳಿಗಿಂತ ಮಿಗಿಲಾದವುಗಳಾಗಿರುವವಲ್ಲವೇ (ನೋಡಿರಿ ಯೆಶಾಯ 55:8, 9).

ದೇವರು ತನ್ನ ವಿಚಾರವನ್ನು ನಮ್ಮ ತಿಳುವಳಿಕೆಯ ಮಟ್ಟಕ್ಕೆ ಹೊಂದಿಸಿಕೊಳ್ಳ ಲಾರನೆಂದು ಹೇಳುವುದು ದೇವರಿಗೆ ಅಭಿನಂದನೆ ಸಲ್ಲಿಸುವದಾಗಿರುವದಿಲ್ಲ. ಕೆಲವು ಸಲ ಒಬ್ಬ ಭಾಷಣಕಾರನಿಗೆ, “ಎಂಥಾ ಅದ್ಭುತವಾದ ಮಾತುಗಾರ! ಅವನು ಬಹಳ ಆಳವಾಗಿ ಮಾತಾಡಿದನು!” ಎಂದು ನಾವು ಹೇಳುತ್ತೇವೆ. ಇದರ ಅರ್ಥ, “ಅದು ಬಹಳ ಚೆನ್ನಾಗಿ ಕೇಳಿಸಿತು, ಆದರೆ ಅವನು ಹೇಳಿದ್ದು ನನಗೆ ಅರ್ಥವಾಗಲಿಲ್ಲ!” ಎಂದಾಗುವುದು. ನಾವು ಅದನ್ನು ಹೇಳುವಾಗ, ಭಾಷಣಕಾರನನ್ನು ನಾವು *ಅಭಿನಂದಿಸುತ್ತಿರುವುದಿಲ್ಲ.* ಜನರಿಗೆ ಅರ್ಥವಾಗುವ ರೀತಿಯಲ್ಲಿ ಮಾತನಾಡಲಾರದ ಭಾಷಣಕಾರನು ಒಳ್ಳೇ ರೀತಿಯ ಸಂಪರ್ಕಿಸುವವನಾಗಿರುವದಿಲ್ಲ! ಆದಾಗ್ಯೂ ಕೆಲವು ಭಾಷಣಕಾರರು ಸಾಮಾನ್ಯ ವ್ಯಕ್ತಿಯೂ ಅರ್ಥಮಾಡಿಕೊಳ್ಳುವ ರೀತಿಯಲ್ಲಿ ಗಡುಚಾದ ವಿಷಯಗಳ ಬಗ್ಗೆ ಮಾತಾಡುತ್ತಾರೆ: ದೇವರು ಅವರಿಗಿಂತ ಕಡಿಮೆ ಸಾಮರ್ಥ್ಯವುಳ್ಳವನಾಗಿರುವನೋ?

ಅದರ ಬಗ್ಗೆ ಈ ರೀತಿಯಲ್ಲಿ ಯೋಚಿಸಿರಿ: ಕಷ್ಟಕರವಾದ ವಿಷಯವನ್ನು ತಿಳಿದುಕೊಳ್ಳಲಿಕ್ಕೆ ಸಾಧ್ಯವಾಗುವಂತೆ ಮಾಡಲಿಕ್ಕೆ, ಭಾಷಣಕಾರನು ವಿಷಯವನ್ನು, ಶ್ರೋತೃಗಳನ್ನು ಮತ್ತು ಹೇಗೆ ಹೇಳಬೇಕು ಎಂಬದನ್ನು ತಿಳಿದುಕೊಳ್ಳುವ ಅಗತ್ಯತೆಯಿದೆ.

ದೇವರು ನಿಶ್ಚಯವಾಗಿಯೂ ತನ್ನ ವಿಷಯವನ್ನು ತಿಳಿದಿರುವನು, ತನ್ನ ಶ್ರೋತೃಗಳನ್ನು ಪರಿಪೂರ್ಣವಾಗಿ ಆತನು ಬಲ್ಲವನಾಗಿರುವನು ಯಾಕಂದರೆ ದೇವರು ಮನುಷ್ಯನನ್ನು ಉಂಟುಮಾಡಿದ್ದಾನೆ. ಸಂಪರ್ಕ ನಿಯಮಗಳನ್ನು ಆತನು ತಾನೇ ರಚಿಸಿರುವದರಿಂದ ಹೇಗೆ ಸಂಪರ್ಕಿಸಬೇಕೆಂಬುದನ್ನು ಆತನು ಬಲ್ಲವನಾಗಿರುವನು. ನಿಶ್ಚಯವಾಗಿಯೂ ದೇವರು ತನ್ನ ವಿಚಾರವನ್ನು ಮನುಷ್ಯನ ತಿಳುವಳಿಕೆಗೆ ಮತ್ತು ಅಗತ್ಯತೆಗಳಿಗೆ ಹೊಂದಿಕೊಳ್ಳುವಂತೆ ಅನ್ವಯಿಸಬಲ್ಲನು!

ಮನುಷ್ಯನು ಅರ್ಥಮಾಡುಕೊಳ್ಳಲಾಗುವಂತೆ, ದೇವರು ಮನುಷ್ಯನಿಗೆ ಮಾತನಾಡಲಾರನೆಂದು ನಾವು ಹೇಳಿದರೆ, *ದೇವರು ಏನನ್ನೋ ಮಾಡಲು ಬಯಸುತ್ತಾನೆ, ಆದರೆ ಮಾಡಲಾರನು ಎಂದು ನಾವು ಹೇಳುತ್ತಿರುವೆವು!* ಜನರೊಂದಿಗೆ ಸಂಪರ್ಕಿಸುವುದು ಆತನ ಶಕ್ತಿಯನ್ನು ಮೀರಿ ಇರುವಂಥದ್ದಾಗಿರುವದಿಲ್ಲ, ನಾವು ಅರ್ಥ ಮಾಡಿಕೊಳ್ಳಬಹುದಾದ ಪ್ರಕಟನೆಯನ್ನು ಒದಗಿಸಲು ದೇವರು ಮನಸ್ಸುಳ್ಳವನೂ ಶಕ್ತನೂ ಆಗಿರುವನು. ಅದು ದೇವರ *ತಪ್ಪಾಗಿರುವದಿಲ್ಲ.*

**ಬೈಬಲಿನ ತಪ್ಪು?**

ಅದು ಬೈಬಲಿನ ತಪ್ಪಾಗಿರುವುದೋ? ಬೈಬಲು ನಾವು ಅರ್ಥಮಾಡಿಕೊಳ್ಳಲಿಕ್ಕೆ *ಆಗದಂಥದ್ದಾಗಿದೆಯೋ?*

ದೇವರ ಸತ್ಯವನ್ನು ವ್ಯಕ್ತಪಡಿಸಲು ಮಾನವ ಭಾಷೆಯು ಸಾಕಷ್ಟಾಗಿರುವುದಿಲ್ಲವೋ? ದೇವರು ತಿಳಿಸಲಿಕ್ಕೆ ಬಯಸುವ ಸತ್ಯಗಳನ್ನು ವ್ಯಕ್ತಪಡಿಸಲಿಕ್ಕೆ ಸಾಕಷ್ಟಾಗಿರುವ ಪದಗಳು ಇರುವುದಿಲ್ಲವೋ? ಆಗಿದ್ದರೆ, ಧರ್ಮವು ಮಾತ್ರವೇ ಮಾನವ ಭಾಷೆಯು ಸಾಕಷ್ಟಾಗಿರದ ಕೇವಲ ವಿಷಯವಾಗಿದೆ. ಎಲ್ಲಾ ಯುಗಗಳ ಎಲ್ಲಾ ಸತ್ಯಗಳು - ಚರಿತ್ರೆಯು, ವಿಜ್ಞಾನದ, ಎಲೋಕ್ಟ್ರೋನಿಕ್ಸ್‌ದ ಇತ್ಯಾದಿಗಳ ಸತ್ಯಗಳು - ಮಾನವ ಭಾಷೆಯಲ್ಲಿ ವ್ಯಕ್ತಪಡಿಸಲ್ಪ ಟ್ಟಿವೆ. ಮಾನವ ಭಾಷೆಯು ಮನುಷ್ಯನನ್ನು ಚಂದ್ರನ ಕಡೆಗೆ ನಡಿಸಲು ಅಗತ್ಯವಾಗಿದ್ದ ಸಂಪರ್ಕವನ್ನು ಒದಗಿಸುವದಾದರೆ, ಆಗ ಪರಲೋಕಕ್ಕೆ ಮನುಷ್ಯನನ್ನು ಒಯ್ಯಲು ಸಹಾಯ ಮಾಡುವದಕ್ಕೆ ಅದು ಯಾಕೆ ಸಾಕಷ್ಟಾಗಿಲ್ಲದ್ದು ಆಗಿರಬೇಕು?

ದೇವರು ತನ್ನ ಚಿತ್ತವನ್ನು ಮನುಷ್ಯನಿಗೆ ಪ್ರಕಟಿಸಿದಾಗ, ಆತನು ಪದಗಳನ್ನು ಉಪಯೋಗಿಸಿದನು. “ಮನುಷ್ಯ ಜ್ಞಾನವು ಕಲಿಸಿದ ಮಾತುಗಳಿಂದ ಹೇಳದೆ ದೇವರಾತ್ಮನೇ ಕಲಿಸಿಕೊಟ್ಟ ಮಾತುಗಳಿಂದ” ಪೌಲನು ಮಾತಾಡಿದನು (1 ಕೊರಿಂಥ 2:13). ಆತ್ಮನ ಪ್ರಕಟನೆಯು *ಮಾತುಗಳ* ಮುಖಾಂತರ ಬಂದಿತು. ದೇವರ ಸಂದೇಶ ವನ್ನು ಪ್ರಕಟಿಸಲು ಮಾತುಗಳು ಸಾಕಷ್ಟಾಗಿರದಿದ್ದರೆ, ಆಗ ದೇವರು ತಾನು ಏನು ಮಾಡುತ್ತಿದ್ದಾನೆಂಬುದನ್ನು ತಿಳಿದಿರುತ್ತಿರಲಿಲ್ಲ. ಆತನು ಮಾತುಗಳನ್ನು ಉಪಯೋಗಿಸಿದ ಸಂಗತಿಯೇ ಮಾತುಗಳು ಸಾಕಷ್ಟಾಗಿದ್ದವು ಎಂಬುದನ್ನು ನನಗೆ ಹೇಳುತ್ತದೆ.

ಮಾನವ ಭಾಷೆಯು ಅರ್ಥಮಾಡಿಕೊಳ್ಳಲಾಗದಷ್ಟು ಅಸ್ಪಷ್ಟವಾಗಿದೆಯೋ? ಅದು ಆಗಿದ್ದರೆ, ಬೈಬಲಿನಲ್ಲಿಯ ಯಾವುದೇ ಒಂದು ವಾಕ್ಯಭಾಗವು ಹಲವಾರು ಸಂಗತಿಗ ಳಲ್ಲಿ ಯಾವುದೇ ಒಂದು ರೀತಿಯಲ್ಲಿ ಅರ್ಥಕೊಡಬಹುದು. ಅದರ ಅರ್ಥ ಏನಾಗಿದೆ ಎಂಬುದನ್ನು ಯಾರು ನಿಶ್ಚಿತವಾಗಿ ತಿಳಿದುಕೊಳ್ಳಲಾರರು. ಘಟನಾತ್ಮಕ ವಿಷಯಗಳಲ್ಲಿ, ಬಹಳ ಸ್ವಲ್ಪ ಭಿನ್ನಾಭಿಪ್ರಾಯವಿರುವುದು. ಉದಾಹರಣೆಗಾಗಿ, ಇಂದು ಯುನೈಟೆಡ್ ಸ್ಟೇಟ್ಸ್‌ದ ಪ್ರೆಸಿಡೆಂಟರು ಯಾರು? ನಿಮಗೆ ಹೇಗೆ ತಿಳಿದಿರುವುದು? ಯಾಕಂದರೆ ಮಾನವ ಭಾಷೆಯಲ್ಲಿ ಅದರ ಬಗ್ಗೆ ಮಾಹಿತಿ ಪಡೆದಿರುವಿರಿ. ಆದುದರಿಂದ, ಭಾಷೆಯು ಹೇಳಿದ್ದರ ಮೇಲೆ ಜನರು ಎಂದೂ ಒಪ್ಪಿಕೊಳ್ಳದಷ್ಟು ಅಸ್ಪಷ್ಟವಾದದ್ದಾಗಿರುವದಿಲ್ಲ.

ಪುನರುತ್ಥಾನದಂಥ ಅನೇಕ ವಿಷಯಗಳಿಂದ ಬೈಬಲು ಅಸ್ಪಷ್ಟವಾಗಿರುವದಿಲ್ಲ. ಯೇಸುವು ಸತ್ತವರೊಳಗಿಂದ ಎದ್ದುಬಂದನು ಎಂಬುದನ್ನು ಬಿಟ್ಟು ಬೇರೆ ಏನನ್ನು ಅರ್ಥಮಾಡಿಕೊಳ್ಳಲು *ಬೈಬಲ್ ಭಾಷೆಯಿಂದ* ಅಸಾಧ್ಯವಾಗಿದೆ.

ಬೈಬಲನ್ನು ಅರ್ಥಮಾಡಿಕೊಳ್ಳುವದರಲ್ಲಿ ನಮಗಿರುವ ಸಮಸ್ಯೆಯು ಭಾಷೆಯು ಅಸ್ಪಷ್ಟವಾಗಿದೆ ಎಂಬುದರೊಂದಿಗಿರುವದಿಲ್ಲ. ಇತರ ಪುಸ್ತಕಗಳನ್ನು ಅಧ್ಯಯನ ಮಾಡುವಂತೆ ನಾವು ಬೈಬಲನ್ನು ಅಧ್ಯಯನ ಮಾಡುವದಿಲ್ಲ. ಇತಿಹಾಸದ ಬಗ್ಗೆ ಒಂದು ಪುಸ್ತಕವನ್ನು ಕುರಿತು ನಾವು ಹೇಳುವದನ್ನು ಕಲ್ಪಿಸಿರಿ: "ಜಾರ್ಜ್ ವಾಷಿಂಗ್ಟನ್ ಅವರು ಯುನೈಟೆಡ್ ಸ್ಟೇಟ್ಸ್‌ದ ಮೊದಲನೆಯ ಅಧ್ಯಕ್ಷರಾಗಿರುವರು ಎಂಬುದರ ಬಗ್ಗೆ ಈ ಮಾತುಗಳು ಅವನು ಇದ್ದನು ಎಂದು ಇಲ್ಲವೇ ಬೇರೆ ಯಾವುದರ ಅರ್ಥವನ್ನು ಕೊಡಬಹುದು. ನನ್ನ ಆಯ್ಕೆಯನ್ನು ಮಾತ್ರ ತೆಗೆದುಕೊಳ್ಳುವೆನು" ನಾವು ಚರಿತ್ರೆಯನ್ನು ಆ ರೀತಿಯಲ್ಲಿ ಓದುವದಿಲ್ಲ; ಆ ರೀತಿಯಲ್ಲಿ ಬೈಬಲನ್ನು ಓದುವುದೂ ಇಲ್ಲ. ಒಂದೇ ಸಮಯದಲ್ಲಿ ಪದಗಳಿಗೆ ವಿರುದ್ಧವಾದ ಅರ್ಥಗಳಿರುವದಿಲ್ಲ. ನಾವು ಬೈಬಲಿನ ಕಡೆಗೆ ಹೋಗುವಾಗ, ಬಾಷೆಯ ಅಸ್ಪಷ್ಟತೆಯು ನಮ್ಮನ್ನು ಸೋಲಿಸುವದಿಲ್ಲ. ಅದರ ಬದಲು ಸಮಸ್ಯೆಯು ನಮ್ಮ ಮನೋಭಾವನೆಯಾಗಿರುತ್ತದೆ. ತಪ್ಪು ಬೈಬಲಿನಲ್ಲಿ ಇರುವದಿಲ್ಲ ಎಂದು ನಾವು ತೀರ್ಮಾನಿಸುತ್ತೇವೆ.

**ಮನುಷ್ಯನ ತಪ್ಪು?**

ಒಂದೇ ರೀತಿಯಲ್ಲಿ ಬೈಬಲನ್ನು ನಾವು ಅರ್ಥಮಾಡಿಕೊಳ್ಳಲಾರದೆ ಇರುವದಕ್ಕೆ ಅದು ಮನುಷ್ಯನ ತಪ್ಪು ಆಗಿರುತ್ತದೋ? ಬೈಬಲಿನ ಭಿನ್ನವಾದ ವ್ಯಾಖ್ಯಾನಗಳು ದೇವರ ಇಲ್ಲವೇ ಬೈಬಲಿನ ತಪ್ಪು ಆಗಿರದೇ ಇರುವದರಿಂದ, ಅದು ಮನುಷ್ಯನ ತಪ್ಪಾಗಿರಬೇಕು. ಜನರು ಪರಿಶುದ್ಧ ಬರಹಗಳನ್ನು ತಪ್ಪಾಗಿ ವ್ಯಾಖ್ಯಾನಿಸುತ್ತಾರೆ ಅದರ ಪರಿಣಾಮವಾಗಿ, ಅವರು ಪರಿಶುದ್ಧ ಬರಹಗಳನ್ನು *ತಪ್ಪಾಗಿ ತಿಳಿದುಕೊಳ್ಳುತ್ತಾರೆ* ಮತ್ತು ಅವರು ಪರಿಶುದ್ಧ ಬರಹಗಳನ್ನು *ತಪ್ಪಾಗಿ ಅನ್ವಯಿಸುತ್ತಾರೆ.* ಆದುದರಿಂದ ಅವರು ದೇವರ ಚಿತ್ತಕ್ಕೆ ವಿಧೇಯ ರಾಗದೇ ಹೋಗುತ್ತಾರೆ.

"ಜನರು ಒಂದೇ ರೀತಿಯಲ್ಲಿ ಬೈಬಲನ್ನು ಯಾಕೆ ಅರ್ಥಮಾಡಿಕೊಳ್ಳಬಾರದು?" ಜನರು ಪ್ರಶ್ನಿಸುತ್ತಾರೆ. ಒಂದು ಉತ್ತರ ಇದಾಗಿದೆ: "ಯಾಕಂದರೆ ಅವರು ಬೈಬಲನ್ನು ಅರ್ಥಮಾಡಿಕೊಳ್ಳಲಾರರು," ಅವರು ಬೈಬಲನ್ನು *ಅಪಾರ್ಥ ಮಾಡಿಕೊಳ್ಳಬಹುದು,* ಆದರೇ ಭಿನ್ನವಾದ ಜನರು ದೇವರ ಪುಸ್ತಕದಿಂದ ಘರ್ಷಣೆಯು ಅರ್ಥಗಳನ್ನು ಹೊಂದಿಕೊಳ್ಳುತ್ತಿದ್ದರೆ, ಅವರು ನಿಶ್ಚಯವಾಗಿಯೂ ಅದನ್ನು ಅರ್ಥಮಾಡಿಕೊಳ್ಳುತ್ತಿರುವದೇ ಇಲ್ಲ.

## ಬೈಬಲನ್ನು ಜನರು ಯಾಕೆ ತಪ್ಪಾಗಿ ವ್ಯಾಖ್ಯಾನಿಸುತ್ತಾರೆ?

ಇದು, ಅನೇಕರು ಬೈಬಲನ್ನು ತಪ್ಪಾಗಿ ಯಾಕೆ ವ್ಯಾಖ್ಯಾನಿಸುತ್ತಾರೆ? ಎಂಬ ಪ್ರಶ್ನೆ ಕೇಳಲು ನಮ್ಮನ್ನು ನಡಿಸುತ್ತದೆ. ಹಲವಾರು ಉತ್ತರಗಳ ಸಾಧ್ಯತೆ ಇರುತ್ತದೆ.

*ಕೆಲವರು ಬೈಬಲನ್ನು ಅಧ್ಯಯನ ಮಾಡುವದಿಲ್ಲ.* ಅವರ ಬೈಬಲುಗಳು ಶೆಲ್ಫುಗಳ ಮೇಲೆ ಇದ್ದು ಧೂಳು ಹಿಡಿಯುತ್ತಲಿವೆ. "ಆ ರೀತಿಯಲ್ಲಿ ನಾನು ಬೈಬಲನ್ನು ಅರ್ಥಮಾಡಿಕೊಳ್ಳಲಾರೆನು" ಎಂದು ಕೆಲವರು ಹೇಳುವಾಗ, ಅವರು ಎಂದೂ ಅದರ ಅಧ್ಯಯನ ಮಾಡದೇ ಇರುವದರಿಂದ ಅರ್ಥಮಾಡಿಕೊಳ್ಳದವರಾಗಿರುತ್ತಾರೆ,

"ನಿಜವಾಗಿಯೂ ಪ್ರಕಟಣೆ ಗ್ರಂಥವನ್ನು ಓದಿದ ಒಬ್ಬರನ್ನು ಸಂದರ್ಶಿಸುವವರೆಗೆ ನಾನು ಪ್ರಕಟನೆ ಗ್ರಂಥದ ಮೇಲೆ ನಾನು ಪ್ರವೀಣನೆಂದು ಯೋಚಿಸಿಕೊಳ್ಳುತ್ತಿದ್ದೇನೆ" ಎಂದು ಹೇಳಿದ ಚಾರ್ಲಿ ಬ್ರೌನ್ ಕಾರ್ಟೂನಿನ ಪಾತ್ರದಂತೆ ಕೆಲವರು ಇದ್ದಾರೆ. ಬೈಬಲ ಅಧ್ಯಯನಕ್ಕೆ ನಿಮ್ಮ ಅತ್ಯುತ್ತಮ ಪ್ರಯತ್ನ ಕೊಡಲು ನೀವು ಸಿದ್ಧರಾಗುವವರೆಗೆ ನೀವು ಬೈಬಲನ್ನು ಸರಿಯಾಗಿ ಅರ್ಥಮಾಡಿಕೊಳ್ಳುವದನ್ನು ನಿರೀಕ್ಷಿಸಲಾರಿರಿ (ನೋಡಿರಿ ಮತ್ತಾಯ 5:6; 2 ತಿಮೊಥೆ 2:15; 1 ಪೇತ್ರ 2:2).

*ಕೆಲವರು ಬೈಬಲನ್ನು ಸತ್ಯದಂತೆ ಸ್ವೀಕರಿಸುವದಿಲ್ಲ.* ಅವರು ಬೈಬಲು ಸತ್ಯವನ್ನು ಒಳಗೊಂಡಿದೆ ಎಂದು ಸ್ವೀಕರಿಸಬಹುದು, ಆದರೆ ಅದು ಸತ್ಯವಾಗಿದೆ ಎಂದು ನಂಬುವದಿಲ್ಲ. ಅದು ಸುಳ್ಳಿನೊಂದಿಗೆ ಮಿಶ್ರವಾದ ಸತ್ಯವಾಗಿದೆ, ಪ್ರಾಚೀನಕಥೆಗಳಿಂದ ಮಿಶ್ರವಾದ ಘಟನೆಯಾಗಿದೆ ಎಂದು ಅವರು ನಂಬುತ್ತಾರೆ. ಕೆಲವೊಂದು ಅಂಶಗಳಲ್ಲಿ ಅದು ಅವಲಂಭನೆಗೆ ಯೋಗ್ಯವಾದದ್ದಲ್ಲವೆಂದು ಅವರು ಯೋಚಿಸುವಾಗ ಬೈಬಲನ್ನು ಅವರು ಹೇಗೆ ಸರಿಯಾಗಿ ವ್ಯಾಖ್ಯಾನಿಸಬಲ್ಲರು. ಬೈಬಲನ್ನು ಅರ್ಥಮಾಡಿ ಕೊಳ್ಳುವದಕ್ಕಾಗಿ ಪರಿಶುದ್ಧ ಬರಹಗಳ ಕಡೆಗೆ ನಿಮಗೆ ಯೋಗ್ಯವಾದ ಮನೋಭಾವನೆ ಇರುವ ಅಗತ್ಯತೆಯಿದೆ: ಬೈಬಲನ್ನು ನೀವು ದೇವರ ವಾಕ್ಯ ಎಂದು ಸ್ವೀಕರಿಸಬೇಕು (1 ಥೆಸಲೊನೀಕ 2:13), ಮತ್ತು ನೀವು ಅದನ್ನು ಪ್ರೀತಿಸಬೇಕು (2 ಥೆಸಲೊನೀಕ 2:8-11).

*ತಪ್ಪಿನಲ್ಲಿ ಕೆಲವರಿಗೆ ಪಟ್ಟಭದ್ರ ಹಿತಾಸಕ್ತಿ ಇರುತ್ತದೆ.* "ವೆಸ್ಟೆಡ್ ಇಂಟರೆಸ್ಟ್"ನ್ನು "ಬದಲಾವಣೆಯಿಂದ ಕಳೆದುಕೊಳ್ಳಬಹುದಾದಂಥದ್ದರಲ್ಲಿ ಆಸಕ್ತಿ" ಎಂದು ಡಿಕ್ಷನರಿಯಲ್ಲಿ ನಿರೂಪಿಸಲ್ಪಟ್ಟಿದೆ. ಪುನಃ ಸ್ಥಾಪಿಸುವ ಚಳವಳದಲ್ಲಿ ಒಬ್ಬ ನಾಯಕನು ಪ್ರೆಸ್ಬಿಟೇರಿಯನ್ ಸಭೆಯಲ್ಲಿ ದೀಕ್ಷೆ ಹೊಂದುತ್ತಿದ್ದಾಗ, "ನೀನು ಫಿಲಡೆಲ್ಫಿಯಾದ ವಿಶ್ವಾಸದ ಅರಿಕೆಯನ್ನು ಸ್ವೀಕರಿಸುವೆಯೋ?" ಎಂದು ಹೇಳಲ್ಪಟ್ಟಾಗ, ಅವನು ತನ್ನ ವಿಶ್ವಾಸದ ಬಗ್ಗೆ ಹೋರಾಡುತ್ತಾ, "ಅದು ಬೈಬಲಿನೊಂದಿಗೆ ಒಪ್ಪಿಕೊಳ್ಳುವದನ್ನು ನಾನು ನೋಡುವವರೆಗೆ ಒಪ್ಪಿಕೊಳ್ಳುತ್ತೇನೆ" ಎಂದು ಉತ್ತರ ಕೊಟ್ಟನು. ಕೆಲವರು ಅದಕ್ಕೆ ವಿರುದ್ಧವಾದದ್ದನ್ನು ಮಾಡುತ್ತಾರೆ: ತಮ್ಮ ವಿಶ್ವಾಸದೊಂದಿಗೆ ಒಪ್ಪಿಕೊಳ್ಳುವಷ್ಟನ್ನು ಮಾತ್ರ ಬೈಬಲನ್ನು ಒಪ್ಪಿಕೊಳ್ಳುತ್ತಾರೆ.

ಆಗಾಗ ಸತ್ಯವು ಬೋಧಿಸಲ್ಪಟ್ಟ ಜನರು ತಮ್ಮ ಪ್ರಸಂಗಿಗಳ ಕಡೆಗೆ ಹೋಗಿ "ಇದರ ಬಗ್ಗೆ ಏನು?" ಎಂದು ಕೇಳುತ್ತಾರೆ. ನಾವು ಕಲಿತದ್ದರೊಂದಿಗೆ ಪ್ರಸಂಗಿಯು ಒಪ್ಪಿ ಕೊಳ್ಳುವದಿಲ್ಲ ಎಂಬುದರ ಬಗ್ಗೆ ಆಶ್ಚರ್ಯಪಡುತ್ತಾರೆ. ಅವರು ಯಾಕೆ ಆಶ್ಚರ್ಯಪಡಬೇಕು? ಸಭೆಯು ಕಲಿಸುವಂಥದ್ದನ್ನು ನಂಬುವದರಲ್ಲಿ ಒಂದು ಸಭೆಯ ಪ್ರಸಂಗಿಗೆ ಸ್ವಾರ್ಥಪರ ಉದ್ದೇಶ ಇರುವುದಿಲ್ಲವೇ? ಅವನ ಉಪಜೀವನವು ಅದರ ಮೇಲೆ ಅವಲಂಭಿಸಿರುತ್ತದೆ! ಭಿನ್ನವಾದ ತತ್ವವು ಸರಿಯಾಗಿದೆ ಎಂದು ಅವನು ಯಾಕೆ ಒಪ್ಪಿಕೊಳ್ಳಲು ಬಯಸುತ್ತಾನೆ?

ನಾವು ಈಗಾಗಲೇ ನಂಬಿರುವಂಥದ್ದರಲ್ಲಿ ನಮಗೆ ಸ್ವಾರ್ಥಪರ ಆಸಕ್ತಿಯಿರುತ್ತದೆ. ನೀನು ನಿನ್ನ ನಂಬಿಕೆಗಳನ್ನು ಬದಲಾಯಿಸಿದರೆ, ಅದು ನಿನಗೆ ಕೆಲವೊಂದು ಹಾನಿಯನ್ನು ಮಾಡುವದಿಲ್ಲವೇ? ಆದುದರಿಂದ, ಬೈಬಲನ್ನು ಸರಿಯಾಗಿ ಅರ್ಥಮಾಡಿಕೊಳ್ಳಲಿಕ್ಕೆ ಯಾವುದು ಅಗತ್ಯವಾಗಿದೆ? ಒಂದು ಯಥಾರ್ಥವಾದ ಹೃದಯ (ಲೂಕ 8:15). ನಿನ್ನಲ್ಲಿ ಯಥಾರ್ಥವಾದ ಹೃದಯ ಇದ್ದರೆ, ಸತ್ಯವನ್ನು ಅಪ್ಪಿಕೊಳ್ಳುವದಕ್ಕಾಗಿ ಯಾವುದನ್ನಾದರೂ ಅದು ಎಷ್ಟೋ ಲಾಭಕರವಾದದ್ದಾಗಿದ್ದರೂ, ಅನುಕೂಲವುಳ್ಳದ್ದಾಗಿದ್ದರೂ, ಹಿತಕರವಾದದ್ದಾಗಿದ್ದರೂ ಬಿಟ್ಟುಕೊಡಲು ಸಿದ್ಧನಾಗಿರುವಿ.

*ಕೆಲವರು ದುರಾಗ್ರಹ ಯೋಚನೆಯೊಂದಿಗೆ ಬೈಬಲಿನ ಕಡೆಗೆ ನೋಡುತ್ತಾರೆ.*

ಬಣ್ಣದ ಗಾಜುಗಳ ಕನ್ನಡಿಕ ಹಾಕಿದವರಂತೆ ಇದಿರುತ್ತದೆ. ಕೆಂಪು ಬಣ್ಣದ ಗಾಜುಗಳ ಕನ್ನಡಿಯ ಮುಖಾಂತರ ಲೋಕದ ಕಡೆಗೆ ನೋಡಿರಿ. ಲೋಕವೆಲ್ಲಾ ಕೆಂಪಾಗಿ ಕಾಣಿಸುವುದು, ನೀಲಿಬಣ್ಣದ ಗಾಜುಗಳ ಕನ್ನಡಿಕದ ಮುಖಾಂತರ ನೀವು ಲೋಕ ವನ್ನೆಲ್ಲ ನೀಲಿಯಾಗಿ ನೋಡುವಿರಿ. ಬೈಬಲಿನ ಬಗ್ಗೆ ಜನರು ಹಾಗಿದ್ದಾರೆ, ಅವರು ಆಗಲೇ ಹಿಡಿದುಕೊಂಡಿರುವ ನಂಬಿಕೆಯನ್ನು ದೃಢಪಡಿಸುವುದನ್ನು ಕಂಡುಕೊಳ್ಳಲು ಅವರು ಬೈಬಲಿನ ಕಡೆಗೆ ಹೋಗುತ್ತಾರೆ. ಆ ರೀತಿಯಲ್ಲಿ ಅವರು ಬೈಬಲಿನ ಬಳಿಗೆ ಹೋಗುವಾಗ, ಅವರು ತಾವು ಹುಡುಕುತ್ತಿರುವದನ್ನು ಕಂಡುಕೊಳ್ಳುವರು.

ದುರಾಗ್ರಹವು ಯೇಸುವಿನ ಮಾತುಗಳಿಗೆ ಯೆಹೂದ್ಯರನ್ನು ಕುರುಡರನ್ನಾಗಿ ಮಾಡಿತ್ತು. ಅದರ ಪೂರ್ವಕಲ್ಪಿತ ಮಾದರಿಗೆ ಆತನು ಹೊಂದಿಕೊಳ್ಳದೇ ಇದ್ದದರಿಂದ ಅವರು ಆತನನ್ನು ಶಿಲುಬೆಗೆ ಹಾಕಿದರು. ಮತ್ತಾಯ 16:18ರಲ್ಲಿ "ಈ ಬಂಡೆಯ ಮೇಲೆ ನನ್ನ ಸಭೆಯನ್ನು ಕಟ್ಟುವೆನು" ಎಂದು ಯೇಸು ಹೇಳಿದ್ದರಲ್ಲಿ ಬೈಬಲು ವಿಶ್ವದ ಬಿಷಪ್‌ನ ಬಗ್ಗೆ ಹೇಳುವದಿಲ್ಲ ಎಂಬುದನ್ನು ಒಬ್ಬ ಮನುಷ್ಯನಿಗೆ ಬೋಧಿಸಲು ಪ್ರಯತ್ನಿಸುತ್ತಿದ್ದೆನು. ಅದಕ್ಕೆ ಅವನು, "ನನ್ನ ನಂಬಿಕೆಯೊಂದಿಗೆ ಈ ವಾಕ್ಯಭಾಗವನ್ನು ನಾನು ಓದುವಾಗ, ನಾನು ಅದರಲ್ಲಿ ವಿಶ್ವದ ಬಿಷಪ್‌ನನ್ನು ನೋಡುವೆನು" ಎಂದು ಉತ್ತರ ಕೊಟ್ಟನು.

ನಮ್ಮ ವಿಶ್ವಾಸದೊಂದಿಗೆ ಬೈಬಲನ್ನು ನಾವು ಓದಲು ಬಯಸುತ್ತೇವೆ. ಅದರಿಂದ ನಾವು ನೋಡಲು ಬಯಸುವದನ್ನೇ ನೋಡುತ್ತೇವೇ. ನಮಗೆ ಯಾವುದರ ಅಗತ್ಯತೆ ಇದೆ? ತೆರೆದ ಮನಸ್ಸು - ಮತ್ತು ಬೆರೆಯನ್ನರ ರೂಢಿ, ಅವರು ಪೌಲನು ಬೋಧಿ ಸಿದ್ದು ಸರಿಯಾಗಿರುವುದೋ ಎಂಬದನ್ನು ನೋಡಲು ಪರಿಶುದ್ಧ ಬರಹಗಳನ್ನು ಹುಡುಕಿದರು (ಅಪೊಸ್ತಲರ ಕೃತ್ಯಗಳು 17:11). ಬೈಬಲನ್ನು ಸರಿಯಾಗಿ ವ್ಯಾಖ್ಯಾನಿಸಲು ದುರಾಗ್ರಹವಿಲ್ಲದೇ ಪರಿಶುದ್ಧ ಬರಹಗಳನ್ನು ಹುಡುಕಿರಿ, ನಿಮಗೆ ಬೋಧಿಸಲ್ಪಟ್ಟದ್ದು ಸತ್ಯವಾಗಿದೆಯೋ ಇಲ್ಲವೋ ಎಂಬದನ್ನು ಹುಡುಕಿ ಕಂಡುಕೊಳ್ಳಿರಿ.

*ಕೆಲವರು ತಮ್ಮ ಅಭಿಪ್ರಾಯಗಳಿಗೆ ಹೊಂದಿಕೊಳ್ಳುವಂತೆ ಪರಿಶುದ್ಧ ಬರಹ ಳನ್ನು ತಪ್ಪಾಗಿ ಅರ್ಥಮಾಡಿಕೊಳ್ಳುತ್ತಾರೆ.* ಪೌಲನ ಪತ್ರಿಕೆಗಳಲ್ಲಿ ಕೆಲವು ಮಾತುಗಳು ತಿಳಿಯುವದಕ್ಕೆ ಕಷ್ಟವಾಗಿದೆ. "ವಿದ್ಯಾಹೀನರೂ ಚಪಲ ಚಿತ್ತರೂ ಹೇಗೆ ನಮಗಿರುವ ಮಿಕ್ಕಾದ ಗ್ರಂಥಗಳಿಗೆ ತಪ್ಪಾದ ಅರ್ಥಮಾಡಿಕೊಂಡಿದ್ದಾರೋ ಹಾಗೆಯೇ ಇವುಗಳಿಗೂ ತಪ್ಪಾದ ಅರ್ಥಮಾಡಿಕೊಂಡು ತಮಗೆ ನಾಶವನ್ನುಂಟು ಮಾಡಿಕೊಳ್ಳುತ್ತಾರೆ" (2 ಪೇತ್ರ 3:16) ಎಂದು ಪೇತ್ರನು ಹೇಳಿದ್ದಾನೆ. ಒಬ್ಬನು ತನ್ನ ಅಭಿಪ್ರಾಯಕ್ಕೆ ತಕ್ಕಂತೆ ಪರಿಶುದ್ಧ ಬರಹವನ್ನು "ತಪ್ಪಾಗಿ ಅರ್ಥಮಾಡಿಕೊಳ್ಳುವುದು" ಅಂದರೆ, "ಅದು ನಾನು ಅರ್ಥಮಾಡಿಕೊಳ್ಳುವಂತೆ - ಅರ್ಥಕೊಡದಿದ್ದರೆ, ಅದು ಆ ಅರ್ಥ ಕೊಡುವಂತೆ ಮಾಡು ವೆನು" ಎಂದು ಹೇಳಿದಂತಾಗುತ್ತದೆ. ಒಂದು ಉದಾಹರಣೆ 1 ಕೊರಿಂಥ 1:17ರಲ್ಲಿ "ಕ್ರಿಸ್ತನು ನನ್ನನ್ನು ಬಾಪ್ತಿಸ್ಮ ಮಾಡಿಸುವದಕ್ಕೆ ಕಳುಹಿಸುವದಿಲ್ಲ" ಎಂದು ಪೌಲನು ಹೇಳಿ ದ್ದನ್ನು, ಬಾಪ್ತಿಸ್ಮವು ಮಹತ್ವವುಳ್ಳದ್ದು ಎಂದು ಹೊಸ ಒಡಂಬಡಿಕೆಯು ಬೋಧಿಸುವಾಗ, ಬಾಪ್ತಿಸ್ಮವು ಮಹತ್ವದ್ದಾಗಿರುವದಿಲ್ಲ ಎಂದರ್ಥ ಮಾಡುವಂಥದ್ದಾಗಿದೆ.

ನಾವು ನಂಬಿದ್ದಂಥದ್ದರಿಂದ ಭಿನ್ನವಾದದ್ದನ್ನು ಬೈಬಲ್ ಬೋಧಿಸಿದರೆ, ನಮ್ಮ ನಂಬಿಕೆಗೆ ಹೊಂದಿಕೊಳ್ಳುವಂತೆ ಪರಿಶುದ್ಧ ಬರಹಗಳನ್ನು ತಪ್ಪಾಗಿ ವ್ಯಾಖ್ಯಾನಿಸದೇ, ಪರಿಶುದ್ಧ ಬರಹಗಳಿಗೆ ಹೊಂದಿಕೊಳ್ಳುವಂತೇ ನಮ್ಮ ನಂಬಿಕೆಗಳನ್ನು ನಾವು ಬದಲಾಯಿಸುವ ಅಗತ್ಯತೆಯಿದೆ.

*ಕೆಲವರು ಬೈಬಲ್ ಅಧ್ಯಯನದ ತಪ್ಪಾದ ವಿಧಾನಗಳನ್ನು ಉಪಯೋಗಿ ಸುತ್ತಾರೆ.* ಕೆಲವು ಜನರು ಒಳ್ಳೆಯ ಹೃದಯವುಳ್ಳವರಾಗಿದ್ದಾರೆ, ಅವರು ಬೈಬಲನ್ನು

ಗೌರವಿಸುತ್ತಾರೆ, ದುರಾಗ್ರಹವಿಲ್ಲದವರಾಗಿರಲು ಬಯಸುತ್ತಾರೆ. ವ್ಯಾಖ್ಯಾನದ ಮೂಲ ವ್ಯವಹಾರ ಜ್ಞಾನದ ನಿಯಮಗಳನ್ನು ಕಡೆಗಣಿಸುವದರಿಂದ ಅವರು ತಪ್ಪುಗಳನ್ನು ಮಾಡುತ್ತಾರೆ. ಇಲ್ಲಿ ಆ ಕೆಲವು ನಿಯಮಗಳಿವೆ:

1. ಹಿನ್ನೆಲೆಯನ್ನು ಗಮನಿಸಿರಿ. ಯಾರು ಮಾತಾಡುತ್ತಿದ್ದಾರೆ? ಯಾರಿಗೆ? ಯಾವಾಗ? ಯಾವ ಉದ್ದೇಶಕ್ಕಾಗಿ? ಎಂದು ಕೇಳಿರಿ.
2. ವಿಷಯದ ಮೇಲೆ *ಎಲ್ಲಾ* ಸತ್ಯಗಳನ್ನು ಪಡೆದುಕೊಳ್ಳಿರಿ.
3. ಸರಳ ವಾಕ್ಯಭಾಗಗಳು ಕಠಿಣವಾದವುಗಳನ್ನು ವ್ಯಾಖ್ಯಾನಿಸಲಿ.
4. ಅಕ್ಷರಶಃವಾದ ಮತ್ತು ಅಲಂಕಾರಿಕ ಮಾತುಗಳ ಮಧ್ಯೆ ಭಿನ್ನತೆ ಮಾಡಿರಿ.
5. "ಈ ವಾಕ್ಯಭಾಗವು ನನಗೆ ಹೇಗೆ ಅನ್ವಯಿಸುತ್ತದೆ?" ಎಂದು ಪ್ರಶ್ನಿಸಿ ಕೊಳ್ಳಿರಿ.

ಜನರು ಈ ನಿಯಮಗಳನ್ನು ಉಲ್ಲಂಘಿಸುತ್ತಾರೆ. ಉದಾಹರಣೆಯಾಗಿ, ಕ್ರಿಸ್ತನು ಹಿಂದಿರುಗಿ ಬರುವಾಗ ಭೂಲೋಕದಲ್ಲಿ ತನ್ನ ರಾಜ್ಯವನ್ನು ಸ್ಥಾಪಿಸುವನು ಮತ್ತು ಇಲ್ಲಿ ಒಂದು ಸಾವಿರವರ್ಷ ಆಳುವನು ಎಂದು ಬೋಧಿಸುವರು. ಅವರು ಈ ವ್ಯಾಖ್ಯಾನವನ್ನು ಅಲಂಕಾರಿಕ ಮತ್ತು ಅಸ್ಪಷ್ಟವಾದ ವಾಕ್ಯಭಾಗಗಳ ಮೇಲೆ ಅವಲಂಭಿಸಿ, ಕ್ರಿಸ್ತನ ರಾಜ್ಯವು ಈ ಲೋಕದ್ದಲ್ಲ ಎಂದು ಸರಳವಾಗಿ ಹೇಳುವ ವಾಕ್ಯಭಾಗಗಳನ್ನು ಕಡೆಗಣಿಸುವರು (ಯೋಹಾನ 18:36).

*ಬೈಬಲಿನ ಅಷ್ಟು ತಪ್ಪಾಗಿ ವ್ಯಾಖ್ಯಾನಿಸುವದಲ್ಲಿ ಮೂಲ ಸಮಸ್ಯೆಯು ಕೆಲವರು ಸತ್ಯವನ್ನು ಸಾಕಷ್ಟು ಪ್ರೀತಿಸದೆ ಇರುವುದಾಗಿದೆ.* 2 ಥೆಸಲೊನೀಕ 2:10-12 ಯೋಚಿಸಿರಿ:

> ... ಅವರು ಸತ್ಯದ ಮೇಲೆ ಪ್ರೀತಿಯನ್ನಿಡದ ಕಾರಣದಿಂದ ರಕ್ಷಣೆಯನ್ನು ಹೊಂದದೆ ನಾಶವಾಗುತ್ತಾರೆ. ಅದೇ ಕಾರಣದಿಂದ ದೇವರು ಅಸತ್ಯ ನಡಿಸುವ ಭ್ರಮೆಯನ್ನು ಅವರಲ್ಲಿಗೆ ಕಳುಹಿಸಿ ಆ ಸುಳ್ಳನ್ನು ನಂಬುವದಕ್ಕೆ ಅವರನ್ನು ಬಿಡುತ್ತಾನೆ, ಸತ್ಯವನ್ನು ನಂಬದೆ ಅನೀತಿಯಲ್ಲಿ ಆನಂದಪಡುವವರೆಲ್ಲರೂ ಈ ಪ್ರಕಾರ ನ್ಯಾಯತೀರ್ಪಿಗೆ ಒಳಗಾಗುವರು.

ಇದು ಹೇಳುವದನ್ನು ಗಮನಿಸಿರಿ: (1) ಕೆಲವರು ನಾಶವಾಗುವರು. (2) ಅವರು ಸುಳ್ಳನ್ನು ನಂಬಿದ್ದರಿಂದ ನಾಶವಾಗುವರು. (3) ಅವರು ಆ ಸುಳ್ಳನ್ನು ನಂಬುವಂತೆ ಮಾಡಲು ದೇವರು ಒಂದು ಬಲವಾದ ಭ್ರಮೆಯನ್ನು ಕಳುಹಿಸುವನು. (4) ಆ ಸುಳ್ಳನ್ನು ಅವರು ನಂಬುವಂತೆ ಮಾಡಲು ದೇವರು ಅವರಿಗೆ ಭ್ರಮೆಯನ್ನು ಕಳುಹಿಸುವನು *ಯಾಕಂದರೆ* "ಅವರು ಸತ್ಯದ ಪ್ರೀತಿಯನ್ನು ಸ್ವೀಕರಿಸಲಿಲ್ಲ." ಸತ್ಯಕ್ಕಾಗಿರುವ ಪ್ರೀತಿಯು ಮನುಷ್ಯನ ಮನಸ್ಸನ್ನು ಬಿಡುವಾಗ, ಖಾಲಿಯಾದ ಸ್ಥಳವನ್ನು ಒಂದು ಸುಳ್ಳು ತುಂಬಿ ಕೊಳ್ಳುವುದು "ಹುಡಕಿರಿ, ನಿಮಗೆ ಸಿಗುವುದು" (ಮತ್ತಾಯ 7:7) ಎಂದು ಯೇಸು ಹೇಳಿದನು. ನಾವು ಜಾಣತನದಿಂದ ಸತ್ಯವನ್ನು ತಿಳಿದುಕೊಳ್ಳಲು ಹುಡುಕಿದರೆ, ನಾವು ಅದನ್ನು ಕಂಡುಕೊಳ್ಳುವೆವು ಜನರು ಸತ್ಯವನ್ನು ಜಾಣತನದಿಂದ ಹುಡುಕುವಂತೆ ಅದನ್ನು ಅಷ್ಟು ಪ್ರೀತಿ ಮಾಡದೇ ಇರುವುದು ಸಮಸ್ಯೆಯಾಗಿದೆ.

## ಮುಕ್ತಾಯ

ಬೇರೆ ಕಾರಣಗಳು ಇದ್ದರೂ ಬೈಬಲನ್ನು ಭಿನ್ನವಾಗಿ ಯಾಕೆ ವ್ಯಾಖ್ಯಾನಿಸುತ್ತಾರೆ ಎಂಬುದನ್ನು ನೋಡಲು ಇವು ಸಾಕಷ್ಟು ಕಾರಣಗಳಾಗಿವೆ.

ಈ ವಿಚಾರಗಳನ್ನು ನೀವು ಸ್ವೀಕರಿಸಬಹುದು ಇಲ್ಲವೇ ಬಿಡಬಹುದು, ನಿಶ್ಚಯವಾಗಿಯೂ ಇದು ದೇವರ ತಪ್ಪಲ್ಲ ಮತ್ತು ಬೈಬಲಿನ ತಪ್ಪೂ ಅಲ್ಲ, ಜನರು ಒಪ್ಪಿಕೊಳ್ಳುವುದಿಲ್ಲ - ಇದು ನಮ್ಮ ತಪ್ಪಾಗಿದೆ. ನಾವು ಒಪ್ಪಿಕೊಳ್ಳದೆ ಇರುವಾಗ, ನಾನು ಸರಿಯಾಗಿ ಇಲ್ಲದೇ ಇರಬಹುದು, ಮತ್ತು ನೀನು ಸರಿಯಾಗಿ ಇಲ್ಲದೇ ಇರಬಹುದು, ಆದರೆ ಬೈಬಲ್ ಸರಿಯಾಗಿರುತ್ತದೆ. ನಾವಿಬ್ಬರೂ ಸತ್ಯವನ್ನು ತಪ್ಪಿಸಿಕೊಂಡಿರಬಹುದು, ಆದರೆ ಸತ್ಯವು ಇರುತ್ತದೆ, ಮತ್ತು ಅದನ್ನು ಬೈಬಲಿನಲ್ಲಿ ಕಂಡುಕೊಳ್ಳಬಹುದು.

ಬೈಬಲನ್ನು ಅನೇಕರು ತಪ್ಪಾಗಿ ವ್ಯಾಖ್ಯಾನಿಸುವದರಿಂದ, ನನ್ನ ವ್ಯಾಖ್ಯಾನದಲ್ಲಿ ನಾನು ಸರಿಯಾಗಿದ್ದೇನೆಂದು ಹೇಗೆ ನಿಶ್ಚಿತತೆವುಳ್ಳವನಾಗಿರಬಹುದು? ಅತೀ ಹೆಚ್ಚು ಸ್ಪಷ್ಟವಾಗಿರುವ ಪರಿಶುದ್ಧ ಬರಹಗಳ ಮೇಲೆ ಕಾರ್ಯಮಾಡಿರಿ. ಉದಾಹರಣೆಯಾಗಿ, ಸುವಾರ್ತೆಯ ಘಟನೆಗಳನ್ನು, ಆಜ್ಞೆಗಳನ್ನು, ಮತ್ತು ವಾಗ್ದಾನಗಳನ್ನು ಒಳಗೊಂಡಿರುತ್ತದೆ. ಸುವಾರ್ತೆಯಿಂದ ರಕ್ಷಿಸಲ್ಪಡಲಿಕ್ಕಾಗುವಂತೆ, ಮೂಲ ಘಟನೆಗಳನ್ನು ನಂಬಿರಿ, ಸ್ಪಷ್ಟವಾದ ಆಜ್ಞೆಗಳಿಗೆ ವಿಧೇಯರಾಗಿರಿ, ಮತ್ತು ಸರಳವಾದ ವಾಗ್ದಾನಗಳನ್ನು ಅನುಸರಿಸಿರಿ. ನೀನು ಕ್ರೈಸ್ತನಾಗಿರದಿದ್ದರೆ, ಯೇಸುವು ದೇವರ ಕುಮಾರನಾಗಿದ್ದಾನೆ ಎಂಬುದನ್ನು ನಂಬು; ಮಾನಸಾಂತರ ಪಟ್ಟು ಬಾಪ್ತಿಸ್ಮ ಹೊಂದಿಕೊಳ್ಳುವ ಸ್ಪಷ್ಟವಾದ ಆಜ್ಞೆಗಳಿಗೆ ವಿಧೇಯನಾಗು (ಅಪೊಸ್ತಲರ ಕೃತ್ಯಗಳು 2:38); ಮತ್ತು ಪರಿಶುದ್ಧಾತ್ಮನ ವರದ ಅಮೂಲ್ಯವಾದ ವಾಗ್ದಾನಗಳನ್ನು, ಪಾಪಗಳ ಕ್ಷಮಾಪಣೆಯನ್ನು ಮತ್ತು ನಿತ್ಯಜೀವದ ನಿರೀಕ್ಷೆಯನ್ನು ಹೊಂದಿಕೊ! ಇದು ಸುಲಭವಾಗಿದೆಯಲ್ಲವೇ?

ನಿನ್ನ ಜ್ಞಾನದ ಮೇಲೆ ಯಾಕೆ ಕಾರ್ಯಮಾಡಬಾರದು ಮತ್ತು ನೀನು ಮಾಡಬೇಕು ಎಂದು ಕರ್ತನು ಬಯಸುವುದನ್ನು ಯಾಕೆ ಮಾಡಬಾರದು?

---

ಟಿಪ್ಪಣೆಗಳು

[1]Jesse Lyman Hurlbut, *The Story of the Christian Church* (Philadelphia: John C. Winston Co., 1933), 159-160. [2] Fanning Yater Tant, "The Bible Is Not a Conundrum," in *Christian Reporter,* weekly publication of the City Beach church of Christ, Perth, Western Australia, 22 January 1971.

© 2009 Truth for Today